**ಓ ಎಸ್ ನಂ. 73/2022 ಡಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 11.09.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನನ್ನ ತಂದೆಯ ಹೆಸರು ತಿಮ್ಮೇಗೌಡ ಮತ್ತು ತಾಯಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿ. ನಮ್ಮ ತಂದೆ ತಾಯಿಗೆ ನಾವು 3 ಜನ ಮಕ್ಕಳು ಎಂದರೆ ಸರಿ. 6 ನೇ ಪ್ರತಿವಾದಿ ರತ್ನಮ್ಮ ಮತ್ತು ವಾದಿ ಇಂದ್ರಮ್ಮ ನನ್ನ ಸಹೋದರಿಯರು ಎಂದರೆ ಸರಿ. ನಮ್ಮ ತಂದೆ ಬದುಕಿದ್ದಾಗ ನನ್ನ ಹಾಗೂ ನನ್ನ ಸಹೋದರಿಯರ ನಡುವೆ ಪಾಲು ವಿಭಜನೆ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ತಿಳಿದುಕೊಂಡಿದ್ದೇನೆ. ದಾವಾ ಷೆಡ್ಯೂಲ್ ಸರ್ವೆ ನಂ. 58/2, 58/5, 58/10, 59/4, 65/1, 547/1, 547/2, 547/3, 547/7, 549/2 ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸರ್ವೆ ನಂ. 547/3 ಪೈಕಿ 0.15 ಗುಂಟೆ ಜಮೀನು ಹೇಮಾವತಿ ಎಡದಂಡೆ ನಾಲೆಗೆ ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಅದರ ಪರಿಹಾರದ ಹಣವನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿ. ಭೂಸ್ವಾಧೀನಗೊಂಡಿರುವ 0.15 ಗುಂಟೆ ಜಮೀನು ಸಹ ನಮ್ಮ ಪಿತ್ರಾರ್ಜಿತ ಜಮೀನು ಎಂದರೆ ಸರಿ. ಪರಿಹಾರದ ಹಣದಿಂದ ದಾವಾ ಷೆಡ್ಯೂಲ್ ಸರ್ವೆ ನಂ. 58/7 ಮತ್ತು 18/4 ನ್ನು ನನ್ನ ಮಗ ಹಾಗೂ ಹೆಂಡತಿ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದರೆ ಸರಿ. ಗುಮ್ಮನಹಳ್ಳಿ ಗ್ರಾಮದಲ್ಲಿ ನನ್ನ ಹೆಂಡತಿ ಹೆಸರಿನಲ್ಲಿ ಮನೆ ಕಟ್ಟಡ ಇದೆ ಎಂದರೆ ಸರಿ. ಆ ಕಟ್ಟಡದಲ್ಲಿ 4 ಮನೆಗಳು ಇವೆ ಎಂದರೆ ಸರಿ. ಆ ಮನೆಯನ್ನು ಸಹ ಒಟ್ಟು ಕುಟುಂಬದ ಆದಾಯದಿಂದ ಕಟ್ಟಿಸಿದ್ದೇನೆ ಎಂದರೆ ಸರಿ. ನನ್ನ ಹಾಗೂ ನನ್ನ ಮಕ್ಕಳ ಸ್ವಯಾರ್ಜಿತ ಆಸ್ತಿಗಳನ್ನು ವಾದಿಯು ಈ ದಾವಾ ಷೆಡ್ಯೂಲ್ ನಲ್ಲಿ ಸೇರಿಸಿಲ್ಲ ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿಗಳು ಹಾಗೂ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ಅರ್ಜಿಸಿರುವ ಒಟ್ಟು ಕುಟುಂಬದ ಆಸ್ತಿಗಳನ್ನು ಮಾತ್ರ ವಾದಿಯು ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿ.

ನಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯ ಸಂಗತಿಗಳನ್ನು

ತಿಳಿದುಕೊಂಡಿದ್ದೇನೆ. ನಾನು ಹಾಗೂ ನನ್ನ ಹೆಂಡತಿ ಮಕ್ಕಳು ಮಾತ್ರ ಸೇರಿ ಅಸಲು ದಾವೆ ಸಂಖ್ಯೆ 75/2017 ನ್ನು ವಿಭಾಗಕ್ಕಾಗಿ ಹೂಡಿದ್ದೆವು ಎಂದರೆ ಸರಿ. 2017 ಕ್ಕೂ ಮೊದಲು ನನ್ನ ಸಹೋದರಿ ವಾದಿ ಇಂದ್ರಮ್ಮರವರು ವಿಭಾಗ ಕೋರಿ ಊರಿನಲ್ಲಿ ಪಂಚಾಯಿತಿ ಮಾಡಿಸಿದ್ದರು ಎಂದರೆ, ನನ್ನ 4 ಜನ ಅಣ್ಣ ತಮ್ಮಂದಿರನ್ನು ಸೇರಿಸಿಕೊಂಡು ನನ್ನನ್ನು ಪಾಲು ಕೇಳಿದ್ದರು. ಹಾಗೆ ಪಾಲು ಕೇಳಿದ ಕಾರಣ ವಾದಿಗೆ ಗೊತ್ತಾಗದ ಹಾಗೆ ನಾನು ಮತ್ತು ನನ್ನ ಹೆಂಡತಿ ಮಕ್ಕಳು ಸೇರಿಕೊಂಡು ವಿಭಾಗಕ್ಕಾಗಿ ದಾವೆ ಹೂಡಿದ್ದೆವು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನ್ನ ಒಡಹುಟ್ಟಿದ ಸಹೋದರಿಯರಿಗೆ ಪಾಲು ನೀಡಲು ನನಗೆ ಯಾವುದೇ ತೊಂದರೆ ಇಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**